

ಕೇಂದ್ರ ಲೋಕಸೇವಾ ಆಯೋಗ ಫಲಿತಾಂಶ ಪ್ರಕಟ

ಕರ್ನಾಟಕದ 20ಕ್ಕೂ ಹೆಚ್ಚು ಪ್ರತಿಭಾವಂತರು ಆಯ್ಕೆ

# ಶುಭಂ ಯುಪಿಎಸ್ಸಿ ಟಾಪರ್

**ದಿಲ್ಲಿ / ಬೆಂಗಳೂರು:** ಕೇಂದ್ರ ಲೋಕಸೇವಾ ಆಯೋಗ(ಯುಪಿಎಸ್‌ಸಿ) 2020ರ ಸಾಲಿನ ನಾಗರಿಕ ಸೇವೆಗಳ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದೆ. ಬಿಹಾರದ ಶುಭಂ ಕುಮಾರ್ ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ. 20ಕ್ಕೂ ಹೆಚ್ಚು ಕನ್ನಡಿಗರು ಟಾಪರ್‌ಗಳಾಗಿದ್ದಾರೆ.

77ನೇ ರ‍್ಯಾಂಕ್ ಗಳಿಸಿರುವ ಕೆ.ಜೆ. ಅಕ್ಷಯ್ ಸಿಂಹ ಅವರು ಕರ್ನಾಟಕದ ಮಟ್ಟಿಗೆ ಮೊದಲ ಸ್ಥಾನದಲ್ಲಿದ್ದಾರೆ. ರಾಷ್ಟ್ರಮಟ್ಟದಲ್ಲಿ ಪ್ರಥಮ ರ‍್ಯಾಂಕ್ ಗಳಿಸಿರುವ ಶುಭಂ ಕುಮಾರ್ ಐಐಟಿ ಬಾಂಬೆಯ ಬಿ.ಟೆಕ್ ಪದವೀಧರರು. ಹಾಗೆಯೇ ಮಧ್ಯಪ್ರದೇಶದ ಜಾಗೃತಿ ಅವಸ್ಥಿ ಮತ್ತು ಅಂಕಿತಾ ಜೈನ್ ಕ್ರಮವಾಗಿ 2 ಮತ್ತು 3ನೇ ರ‍್ಯಾಂಕ್ ಗಳಿಸಿದ್ದಾರೆ. ಮಹಿಳೆಯರ ಪೈಕಿ ಜಾಗೃತಿ ಅಗ್ರಸ್ಥಾನಿಯಾಗಿದ್ದಾರೆ.

ಟಾಪ್ 25 ರ‍್ಯಾಂಕ್ ಪಡೆದವರು ಪೈಕಿ 13 ಪುರುಷರು ಮತ್ತು 12 ಮಹಿಳೆಯರಿದ್ದಾರೆ. ಪರೀಕ್ಷೆಯಲ್ಲಿ ಯಶಸ್ಸು ಪಡೆದವರ ಪೈಕಿ 25 ಅಭ್ಯರ್ಥಿಗಳು ವಿಶೇಷಚೇತನರು. ರಾಜ್ಯದಲ್ಲಿ ಕೆ.ಜೆ. ಅಕ್ಷಯ್ ಸಿಂಹ ಅವರ ನಂತರದ ಸ್ಥಾನದಲ್ಲಿ ನಿಶ್ಚಯ್ ಪ್ರಸಾದ್, ಎಂ.ಪಿ. ಶ್ರೀನಿವಾಸ್ ಹಾಗೂ ಅನಿರುದ್ಧ ಆರ್ ಗಂಗಾವರಂ ಇದ್ದಾರೆ.

ಶುಭಂ ಕುಮಾರ್ 1 · ಜಾಗೃತಿ ಅವಸ್ಥಿ 2 · ಅಂಕಿತಾ ಜೈನ್ 3 · ಅಕ್ಷಯ್ ಸಿಂಹ 77

**761** ಮಂದಿ ನಾಗರಿಕ ಸೇವಾ ಹುದ್ದೆಗಳಿಗೆ ಆಯ್ಕೆ — 545 ಪುರುಷರು, 216 ಮಹಿಳೆಯರು

**ಟಾಪ್ 5 ರ‍್ಯಾಂಕ್ಸ್**

| | |
|---|---|
| ಶುಭಂ ಕುಮಾರ್ | 01 |
| ಜಾಗೃತಿ ಅವಸ್ಥಿ | 02 |
| ಅಂಕಿತಾ ಜೈನ್ | 03 |
| ಯಶ್ ಜಾಲೂಕಾ | 04 |
| ಮಮತಾ ಯಾದವ್ | 05 |

**ರಾಜ್ಯದ ಟಾಪರ್ಸ್**

ಕೆ.ಜೆ. ಅಕ್ಷಯ್ ಸಿಂಹ(77), ನಿಶ್ಚಯ್ ಪ್ರಸಾದ್ ಎಂ.(130), ಎಂ.ಪಿ. ಶ್ರೀನಿವಾಸ್(235), ಅನಿರುದ್ಧ ಆರ್ ಗಂಗಾವರಂ(252), ಸೂರಜ್ ಡಿ.(255), ನೇತ್ರಾ ಮೇಟಿ(326) ಮತ್ತಿತರರು.

ಯುಪಿಎಸ್ಸಿ ಸಾಧಕರಿಗೆ ರ‍್ಯಾಂಕ್ ಸಿದ್ಧಿ ಛಲದಿಂದ ಗೆದ್ದ ರಾಜ್ಯದ ಪ್ರತಿಭೆಗಳು

»05

ವಿಕ ಹೊಂಗಿರಣ

ಆತ್ಮವಿಶ್ವಾಸಭರಿತ ವ್ಯಕ್ತಿಗಳು ಮಾತ್ರವೇ ಮತ್ತೊಬ್ಬರ ವಿಶ್ವಾಸ ಹಾಗೂ ನಂಬಿಕೆಯನ್ನು ಗಳಿಸಲು ಸಮರ್ಥರಾಗಿರುತ್ತಾರೆ.

ಪಂಚಮಸಾಲಿ ಮೀಸಲು: ಆಯೋಗದ ವರದಿ ಬಳಿಕ

## ಚಿನ್ನದ ದರ ಇಳಿಕೆ

**ಹೊಸದಿಲ್ಲಿ:** ಚಿನ್ನದ ದರದಲ್ಲಿ ಮತ್ತೆ ಇಳಿಕೆಯಾಗಿದೆ. ಶುಕ್ರವಾರ 430 ರೂ. ತಗ್ಗಿದ್ದು, ಬೆಂಗಳೂರಿನಲ್ಲಿ 24 ಕ್ಯಾರಟ್ ಚಿನ್ನದ ದರ ಪ್ರತಿ 10 ಗ್ರಾಮ್‌ಗೆ 47,130 ರೂ.ಗೆ ಇಳಿಯಿತು. ಆಭರಣ ಚಿನ್ನ ಅಥವಾ 22 ಕ್ಯಾರಟ್ ದರದಲ್ಲಿ 400 ರೂ. ತಗ್ಗಿದ್ದು,

# Vijaya Karnataka

**Saturday 25th September 2021, Page No.01 and 05**

**UPSC: RVCE Alumni Yatish R Topper**

